# ಮೊನಿಶಾ ಧಮ್!

‘ಕುಚ್ಚು ಕುಚ್ಚು ರುಕ್ಕಮ್ಮಾ’ ಕೊನೆಗೂ ಮೊನ್ನೆ ಮದುವೆಯಾದಳು. ನಟನೆ ಮತ್ತು ಸೌಂದರ್ಯ ಎರಡರ ಅಚ್ಚುಕಟ್ಟಾದ ಮಿಶ್ರಣದಂತಿದ್ದ ಮೊನಿಶಾ ಕೊಯಿರಾಲಾ ಮದುವೆಯಾದದ್ದು ದೊಡ್ಡ ಸುದ್ದಿಯೇನಾಗಲಿಲ್ಲ. ಯಾಕೆಂದರೆ ಹೊಸ ಹೀರೋಯಿನ್‌ಗಳ ಅಬ್ಬರದಲ್ಲಿ ಆಕೆ ಸೈಡ್‌ವಿಂಗಿಗೆ ಸರಿದು ಆಗಲೇ ನಾಲ್ಕೈದು ವರ್ಷಗಳಾಗಿವೆ.

ಆದರೆ ಮದುವೆ ಮನೆಯಲ್ಲಿ ನಡೆದ ಘಟನೆಯೊಂದು ಸುದ್ದಿಯಾಗಿದೆ. ಮದುಮಗಳ ವೇಷದಲ್ಲಿದ್ದ ಮೊನಿಶಾ ರೂಮೊಳಗೆ ಕುಳಿತು ಕದ್ದುಮುಚ್ಚಿ ಸಿಗರೇಟ್ ಧಮ್ ಹೊಡೆಯುತ್ತಿದ್ದುದನ್ನು ಗಂಡಿನ ಕಡೆಯವರು ನೋಡಿದರಂತೆ! ಹಿರಿಯರೆಲ್ಲ ಸೇರಿ ಮಾಡಿದ ಮದುವೆ ಇದಾದ್ದರಿಂದಲೋ ಅಥವಾ ನೇಪಾಳದ ಪ್ರಧಾನಿ ವಂಶಕ್ಕೆ ಸೇರಿದ್ದರಿಂದಲೋ ದಮ್ಮು ಹೊಡೆದದ್ದನ್ನು ಪ್ರಶ್ನಿಸುವ ಧಮ್ ಯಾರಿಗೂ ಬರಲಿಲ್ಲವಂತೆ!





# ಕಂಗನಾ ಸಿಟ್ಟಿಂಗ್!

ಕಂಗನಾ ರಾನೌತ್‌ಗೆ ಸಿಟ್ಟು ಬಂದಿದೆ. ಆದರೆ ಸಿಟ್ಟನ್ನು ನೇರವಾಗಿ ಹೇಳುವಂತಿಲ್ಲ!

‘ಕೈಟ್ಸ್’ ಚಿತ್ರದಲ್ಲಿ ವಿದೇಶದಿಂದ ಆಮದಾದ ನಟಿ ಬಾರ್ಬರಾ ಮೋರಿ ಎದುರು ಕಂಗನಾಳದ್ದು ಸಣ್ಣ ಪಾತ್ರವೇ. ಆದರೆ ಚಿತ್ರಕಥೆಯ ಬಗ್ಗೆ ಹೇಳುವಾಗ ನಿರ್ಮಾಪಕ ರಾಕೇಶ್ ರೋಶನ್ ಇದು ಇಷ್ಟೊಂದು ಸಣ್ಣ ಪಾತ್ರ ಎಂದು ಹೇಳಿರಲಿಲ್ಲವಂತೆ. ಚಿತ್ರ ತೆರೆಗೆ ಬಂದ ಬಳಿಕ ಪಾತ್ರದ ಸೈಜ್ ತೀರಾ ಸಣ್ಣದಾದದ್ದು ಕಂಗನಾಗೆ ಭಾರೀ ಬೇಸರ ತರಿಸಿದೆಯಂತೆ.

ಆದರೆ ಕಂಗನಾ ಹುಷಾರು ಹುಡುಗಿ. ಈ ಹಿಂದೆ ಮೆಟ್ರೊ ಮತ್ತು ಗ್ಯಾಂಗ್‌ಸ್ಟರ್ ಚಿತ್ರಗಳಲ್ಲಿ ತನಗೆ ಅತ್ಯುತ್ತಮ ಅವಕಾಶ ನೀಡಿರುವ ನಿರ್ದೇಶಕ ಅನುರಾಗ್ ಬಸು ಬಗ್ಗೆ ಸಿಟ್ಟಿನಿಂದ ಮಾತನಾಡಲು ಸಾಧ್ಯವೆ? ಪತ್ರಕರ್ತರು ಕೈಟ್ಸ್ ಬಗ್ಗೆ ಪ್ರಶ್ನಿಸಿದಾಗ ಹುಷಾರಾದ ಕಂಗನಾ, ‘ಆ ಪಾತ್ರವೇ ಅಂತಹದ್ದು. ಚಿಕ್ಕದಾದರೂ ಪರಿಣಾಮಕಾರಿ ಪಾತ್ರ’ ಎಂದಳಂತೆ. ಇನ್ನೇನೋ ಹೇಳಲು ಹೋಗಿ ಹಾಗೇ ತಡೆದು ಕುಳಿತುಕೊಂಡಳಂತೆ!

# ಕತ್ತು ಮತ್ತು ರೀನಾ!

ಕತ್ರೀನಾ ಎಂದರೆ ಸಾಕು, ಯುವಕರು ಕತ್ತು ತಿರುಗಿಸಿ ನೋಡುತ್ತಾರೆ.. ಅಷ್ಟೊಂದು ಸುಂದರಿಯಾಕೆ. ಆದರೆ ಸದ್ಯಕ್ಕೆ ಸ್ಪೇನ್‌ನಲ್ಲಿ ಕತ್ತು ತಿರುಗಿಸಲಾಗದೆ ನೋವು ಅನುಭವಿಸುತ್ತಿದ್ದಾಳಂತೆ! ಹೆಸರಲ್ಲೇ ಕತ್ತು ಇರುವಾಗ ಕತ್ತು ಉಳುಕುವುದು ಸಹಜ ಅನ್ನೋಣವೇ?

ನಡೆದದ್ದಿಷ್ಟೆ– ಸ್ಪೇನ್‌ನಲ್ಲಿ ‘ಜಿಂದಗೀ ಮಿಲೇಗಿ ನ ದುಬಾರಾ’ ಚಿತ್ರದ ಶೂಟಿಂಗ್ ನಡೆಯುತ್ತಿದೆ. ರಾತ್ರಿ ಮಲಗಿದ್ದು ಸರಿಯಾಗದೆ ಕತ್ರೀನಾ ಕತ್ತು ಉಳುಕಿಸಿಕೊಂಡಿದ್ದಾಳೆ. ಮರುದಿನ ಶೂಟಿಂಗ್‌ನಲ್ಲಿ ಸ್ಟಂಟ್ ದೃಶ್ಯ ಬೇರೆ. ತೀರಾ ನೋವಿದ್ದರೂ ಕತ್ರೀನಾ ಶೂಟಿಂಗ್ ಕ್ಯಾನ್ಸಲ್ ಮಾಡಲು ಒಪ್ಪಲಿಲ್ಲವಂತೆ. ಉಳುಕಿದ ಕತ್ತಿನೊಂದಿಗೇ ದೇಹ ಬಳುಕಿಸಿ ಹೊಡೆದಾಟ ಮಾಡಿದಳಂತೆ!

■ ಬಿಂದು

